



# ಗೆರೆ

ಯಾವುದೋ ಒಂದು
ಅದೃಶ್ಯ ಘಳಿಗೆಯಲ್ಲಿ
ಹೇಗೋ ಬಂದು
ನುಸುಳಿಕೊಂಡಿದೆಯಲ್ಲ
ನನ್ನ ನಿನ್ನ ನಡುವಲ್ಲೊಂದು
ತೆಳು ಗೆರೆ.

ಎಳೆದದ್ದು ನಾನಲ್ಲವೆಂದು ನಾನೂ
ನಾನಂತೂ ಅಲ್ಲವೇ ಅಲ್ಲವೆಂದು ನೀನೂ
ಕಂಡೂ ಕಾಣದಂತಿರುವ
ಸೂಕ್ಷ್ಮ ಗೆರೆ,
ಹಾಗಾದರೆ ಹುಟ್ಟಿದ್ದಾದರೂ ಎಲ್ಲಿಂದ?

ಕೊಂಚ ಕೊಂಚವೇ ಬೆಳೆಯುತ್ತಿದೆ
ಬಲಿಯುತ್ತಿದೆಯಾದರೂ
ಇಬ್ಬರಿಗೂ ಅದರ ಮೇಲೆ ಅಸಡ್ಡೆ
ಎಳೆಯದ ಗೆರೆಯನ್ನು ಅಳಿಸುವ ಗೊಡವೆ
ಯ ಉಸಾಬರಿ ಏತಕೆ ಇನ್ನೇತಕೆ?
ಎನ್ನುವ ಉಡಾಫೆ.

ಮಿತಿ ಮೀರಿ ಬೆಳೆದ ಗೆರೆ
ಗೋಡೆಯೋ ಕಣಿವೆಯೋ ಆಗಬಹುದು
ನನಗೆ – ನೀನು, ನಿನಗೆ – ನಾನು
ಕಾಣಿಸದೇ ಹೋಗಬಹುದು

ಗೆರೆಯ ಮೊನಚು
ಕ್ಷಣಾರ್ಧದಲ್ಲಿ ಬೆಳೆದು
ಕುತ್ತಿಗೆಯವರೆಗೂ ಬೆಳೆದು
ಭಯ ಹುಟ್ಟಿಸಬಹುದು

ಈ ಗೆರೆಗಳೇ ಹೀಗೆ;
ಒಂದನ್ನೊಂದು ಕೂಡಿಸುತ್ತವೆ
ಕೆಲವೊಮ್ಮೆ ಗುಣಿಸಿ, ಅಪರೂಪಕ್ಕೆ
ಭಾಗಿಸಿ, ಕಳೆದೂ ಬಿಡುತ್ತವೆ, ಒಮ್ಮೊಮ್ಮೆ
ಒಳಗಿನಾಳದ ಅಹಂಕಾರವನ್ನು...
ಹಾಗೆಂದೇ ನಿಗಾ ಇಡಬೇಕು.
ಈ ಗೆರೆ ಹೇಗೋ ಹುಟ್ಟಿಕೊಂಡಿತೆಂದು
ತಾತ್ಸಾರ ಮಾಡುವಂತಿಲ್ಲ
ಬಿಗುಮಾನ ಸರಿಸಿ ಬೇಗ ಬಾ
ಅಳಿಸಿಬಿಡೋಣ

ಈ ನಡುವೆ ಕಂಡೂ ಕಾಣದಂತೆ ಉಳಿದ
ಚಿರಪರಿಚಿತ ಮುಖವನ್ನು
ಉಳಿಸಿಕೊಳ್ಳಲಾರದೂ, ಗೆರೆ ನಡುವೆ
ಮನಸ ಕನ್ನಡಿಯನು ಒರೆಸೋಣ,
ಪರಸ್ಪರರ ಮುಖ ಕಂಡು
ಸಮಾಧಾನ ಪಟ್ಟುಕೊಳ್ಳೋಣ...

● **ಡಿ.ಎಸ್. ರಾಮಸ್ವಾಮಿ**

ಕಲೆ: ಡಿ.ಕೆ. ರಮೇಶ್